# ಸ್ವಾಸ್ಥ್ಯ ಸಮಾಜಕಟ್ಟುವಲ್ಲಿ ಪತ್ರಕರ್ತರ ಹೊಣೆಗಾರಿಕೆ ಮಹತ್ವದ್ದು : ಹೊರಟ್ಟಿ




ತುಮಕೂರು 11: ಸಮಾಜಮುಖಿ ಸುದ್ದಿಯನ್ನು ಹೆಚ್ಚೆಚ್ಚು ಬಿತ್ತರಿಸುವತ್ತ ಪತ್ರಕರ್ತರು ವಿಶೇಷ ಗಮನಹರಿಸಬೇಕು ಆ ಮೂಲಕ ಮೂಲಕ ಸ್ವಾಸ್ಥ್ಯ ಸಮಾಜ ಕಟ್ಟುವಲ್ಲಿ ಸಾಧ್ಯ. ಹೀಗಾಗಿ ಪತ್ರಕರ್ತರ ಮಹತ್ವ ಸಹ ಹೆಚ್ಚಾಗುತ್ತದೆ. ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಅವರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕ ತುಮಕೂರು ಇದರ ವಾರ್ಷಿಕ ದತ್ತಿ ಪ್ರಶಸ್ತಿಗಳ ಪ್ರದಾನ, ಹಿರಿಯ ಪತ್ರಕರ್ತರಿಗೆ ಗೌರವ ಸನ್ಮಾನ, ಕ್ಷೇಮಾಭಿವೃದ್ಧಿ ನಿಧಿಗೆ ದೇಣಿಗೆ ನೀಡಿದವರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರಿಗೆ ಕೊಡಮಾಡಿದ ಸಮಾಜ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ಮಾಧ್ಯಮಗಳು ಇಂದು ಭ್ರಮಾ ಲೋಕವನ್ನು, ಭಯವನ್ನು ಅತಿಯಾದ ವರ್ಣರಂಜಿತ ಸುದ್ದಿಯತ್ತ ಗಮನಹರಿಸದೇ ಸತ್ಯ ಪ್ರತಿಪಾದಿಸುವ, ಅನ್ಯಾಯದ ವಿರುದ್ಧ ಧ್ವನಿಯೆತ್ತುವ, ಜನಪ್ರತಿನಿಧಿಗಳ ಜನವಿರೋಧಿ ನೀತಿಯ ವಿರುದ್ಧ ಬೆಳಕು ಚೆಲ್ಲಿದರೆ ಆ ಮೂಲಕ ಸ್ವಾಸ್ಥ್ಯ ಹಾಗೂ ಸೌಹಾರ್ದ ಸಮಾಜಕಟ್ಟಲು ಸಾಧ್ಯವಾಗುತ್ತದೆ.

ಮಾಧ್ಯಮಗಳು ಇಂದು ಕೆಲವೇ ಕೆಲವು ಉದ್ಯಮಿಗಳ ಬಂಡವಾಳದ ಮೂಲಕ ನಡೆಯುತ್ತಿರುವುದರಿಂದ ಪತ್ರಕರ್ತರೂ ಸಹ ಅಸಹಾಯಕರಾಗಿದ್ದಾರೆ. ಮುಕ್ತ ಅಭಿಪ್ರಾಯ ಸಲ್ಲಿಸುವಲ್ಲಿ ಸಾಧ್ಯವಾಗದೇ ಇರುವ ವಾತಾವರಣ ಇಂದು ಹೆಚ್ಚಾಗುತ್ತಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಸಮಾಜದ ಧ್ವನಿಯಾಗಿ ನೊಂದವರ, ಬೆಂದವರ, ಪ್ರತಿಭಾವಂತರ ಬೆನ್ನಿಗೆ ನಿಲ್ಲುವ ಕೆಲಸಗಳನ್ನು ಇಂದು ಮಾಧ್ಯಮಗಳು ಮಾಡಬೇಕಾಗಿದೆ. ಅದು ಸಾಧ್ಯವಾಗುತ್ತಿಲ್ಲ ಎಂಬ ಬೇಸರ ನನಗಿದೆ. ನನ್ನ ನಾಲ್ಕು ದಶಕಗಳ ಸಾರ್ವಜನಿಕ ಜೀವನದಲ್ಲಿ 1980ರ ಮಾಧ್ಯಮಗಳು ಇಂದಿನ ಮಾಧ್ಯಮಗಳನ್ನು ಹೋಲಿಕೆ ಮಾಡಿದಾಗ ಸಾಕಷ್ಟು ವ್ಯತ್ಯಾಸಗಳು ಕಾಣುತ್ತಿವೆ. ಇದು ಸರಿಯಾದುದಲ್ಲ. ಈ ವಿಷಯ ಹೆಚ್ಚೆಚ್ಚು ಚರ್ಚೆಯಾಗುವ ಮೂಲಕ ಎಂದಿನಂತೆ ಮಾಧ್ಯಮಗಳು ತಮ್ಮ ಹಳೆಯ ವೈಭವಗಳನ್ನು ಪ್ರದರ್ಶಿಸುವ ಕಾಲ ಇದಾಗಿದೆ.

ಈ ಸಂದರ್ಭದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರಿಗೆ ಸಮಾಜಸೇವಾ ರತ್ನ ಪ್ರಶಸ್ತಿಯನ್ನು ಪತ್ರಕರ್ತರ ಸಂಘದಿಂದ ನೀಡಿ ಗೌರವಿಸಲಾಯಿತು. ಸನ್ಮಾನೋತ್ತರವಾಗಿ ಮಾತನಾಡಿದ ಗೃಹ ಸಚಿವರು ಶಾಸಕಾಂಗ, ಕಾರ್ಯಾಂಗ ನ್ಯಾಯಾಂಗಕ್ಕಿಂತ ಹೆಚ್ಚು ಹೊಣೆಗಾರಿಕೆ ಮಾಧ್ಯಮಗಳ ಮೇಲಿದೆ. ಈ ಮೂರು ಅಂಗಗಳು ದಾರಿ ತಪ್ಪಿದಾಗ ತಿದ್ದಿ ತೀಡುವ ಕೆಲಸವನ್ನು ಹಾಗೂ ಎಚ್ಚರಿಸುವ ಕೆಲಸವನ್ನು ಮಾಡುವ ಜವಾಬ್ದಾರಿ ಪತ್ರಕರ್ತರಿಗೆ ಇದೆ. ಅದನ್ನು ಸದುಪಯೋಗ ಮಾಡಿಕೊಂಡು ಸೌಹಾರ್ದ ಸಮಾಜ ಕಟ್ಟುವಲ್ಲಿ ತಮ್ಮ ಹೊಣೆಗಾರಿಕೆಯನ್ನು ಪ್ರದರ್ಶಿಸುವಂತಾಗಲಿ ಎಂದು ಆಶಿಸಿದರು. ನನ್ನನ್ನು ಪ್ರೀತಿಯಿಂದ ಗೌರವಿಸಿದ ಮಾಧ್ಯಮ ಸ್ನೇಹಿತರಿಗೆ ಅಭಿನಂದನೆ ಸಲ್ಲಿಸುವುದಾಗಿ ಸಹ ಇದೇ ಸಂದರ್ಭದಲ್ಲಿ ಹೇಳಿದರು.

ಈ ಸಂದರ್ಭದಲ್ಲಿ ಹಲವಾರು ಜನಪ್ರತಿನಿದಿಗಳು, ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳು, ಪತ್ರಕರ್ತರ ಸಂಘದ ಪದಾಧಿಕಾರಿಗಳು, ಜಿಲ್ಲಾ ಪತ್ರಕರ್ತರು, ಪತ್ರಿಕಾ ವಿತರಕರು, ವಿವಿಧ ಪತ್ರಿಕೆಗಳ ಓದುಗ ಅಭಿಮಾನಿಗಳು ಭಾಗವಹಿಸಿದ್ದರು.

# ಸ್ವಾಸ್ಥ್ಯ ಸಮಾಜ ಕಟ್ಟುವಲ್ಲಿ ಪತ್ರಕರ್ತರ ಹೊಣೆಗಾರಿಕೆ ಮಹತ್ವದ್ದು : ಸಭಾಪತಿ ಬಸವರಾಜ ಹೊರಟ್ಟಿ




ತುಮಕೂರು, 12. ಸಮಾಜಮುಖಿ ಸುದ್ದಿಯನ್ನು ಹೆಚ್ಚೆಚ್ಚು ಬಿತ್ತರಿಸುವತ್ತ ಪತ್ರಕರ್ತರು ವಿಶೇಷ ಗಮನಹರಿಸಬೇಕು ಆ ಮೂಲಕ ಮೂಲಕ ಸ್ವಾಸ್ಥ್ಯ ಸಮಾಜ ಕಟ್ಟುವಲ್ಲಿ ಸಾಧ್ಯ. ಹೀಗಾಗಿ ಪತ್ರಕರ್ತರ ಮಹತ್ವ ಸಹ ಹೆಚ್ಚಾಗುತ್ತದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಅವರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕ ತುಮಕೂರು ಇದರ ವಾರ್ಷಿಕ ದತ್ತಿ ಪ್ರಶಸ್ತಿಗಳ ಪ್ರದಾನ, ಹಿರಿಯ ಪತ್ರಕರ್ತರಿಗೆ ಗೌರವ ಸನ್ಮಾನ, ಕ್ಷೇಮಾಭಿವೃದ್ಧಿ ನಿಧಿಗೆ ದೇಣಿಗೆ ನೀಡಿದವರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರಿಗೆ ಕೊಡಮಾಡಿದ ಸಮಾಜ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ಮಾಧ್ಯಮಗಳು ಇಂದು ಭ್ರಮಾ ಲೋಕವನ್ನು, ಭಯವನ್ನು ಅತಿಯಾದ ವರ್ಣರಂಜಿತ ಸುದ್ದಿಯತ್ತ ಗಮನಹರಿಸದೇ ಸತ್ಯ ಪ್ರತಿಪಾದಿಸುವ, ಅನ್ಯಾಯದ ವಿರುದ್ಧ ಧ್ವನಿಯೆತ್ತುವ, ಜನಪ್ರತಿನಿಧಿಗಳ ಜನವಿರೋಧಿ ನೀತಿಯ ವಿರುದ್ಧ ಬೆಳಕು ಚೆಲ್ಲಿದರೆ ಆ ಮೂಲಕ ಸ್ವಾಸ್ಥ್ಯ ಹಾಗೂ ಸೌಹಾರ್ದ ಸಮಾಜ ಕಟ್ಟಲು ಸಾಧ್ಯವಾಗುತ್ತದೆ.

ಮಾಧ್ಯಮಗಳು ಇಂದು ಕೆಲವೇ ಕೆಲವು ಉದ್ಯಮಿಗಳ ಬಂಡವಾಳದ ಮೂಲಕ ನಡೆಯುತ್ತಿರುವುದರಿಂದ ಪತ್ರಕರ್ತರೂ ಸಹ ಅಸಹಾಯಕರಾಗಿದ್ದಾರೆ. ಮುಕ್ತ ಅಭಿಪ್ರಾಯ ಸಲ್ಲಿಸುವಲ್ಲಿ ಸಾಧ್ಯವಾಗದೇ ಇರುವ ವಾತಾವರಣ ಇಂದು ಹೆಚ್ಚಾಗುತ್ತಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಸಮಾಜದ ಧ್ವನಿಯಾಗಿ ನೊಂದವರ, ಬೆಂದವರ, ಪ್ರತಿಭಾವಂತರ ಬೆನ್ನಿಗೆ ನಿಲ್ಲುವ ಕೆಲಸಗಳನ್ನು ಇಂದು ಮಾಧ್ಯಮಗಳು ಮಾಡಬೇಕಾಗಿದೆ.

ಅದು ಸಾಧ್ಯವಾಗುತ್ತಿಲ್ಲ ಎಂಬ ಬೇಸರ ನನಗಿದೆ. ನನ್ನ ನಾಲ್ಕು ದಶಕಗಳ ಸಾರ್ವಜನಿಕ ಜೀವನದಲ್ಲಿ 1980ರ ಮಾಧ್ಯಮಗಳು ಇಂದಿನ ಮಾಧ್ಯಮಗಳನ್ನು ಹೋಲಿಕೆ ಮಾಡಿದಾಗ ಸಾಕಷ್ಟು ವ್ಯತ್ಯಾಸಗಳು ಕಾಣುತ್ತಿವೆ. ಇದು ಸರಿಯಾದುದಲ್ಲ. ಈ ವಿಷಯ ಹೆಚ್ಚೆಚ್ಚು ಚರ್ಚೆಯಾಗುವ ಮೂಲಕ ಎಂದಿನಂತೆ ಮಾಧ್ಯಮಗಳು ತಮ್ಮ ಹಳೆಯ ವೈಭವಗಳನ್ನು ಪ್ರದರ್ಶಿಸುವ ಕಾಲ ಇದಾಗಿದೆ.

ಈ ಸಂದರ್ಭದಲ್ಲಿ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರಿಗೆ ಸಮಾಜ ಸೇವಾ ರತ್ನ ಪ್ರಶಸ್ತಿಯನ್ನು ಪತ್ರಕರ್ತರ ಸಂಘದಿಂದ ನೀಡಿ ಗೌರವಿಸಲಾಯಿತು.

ಸನ್ಮಾನೋತ್ತರವಾಗಿ ಮಾತನಾಡಿದ ಗೃಹ ಸಚಿವರು ಶಾಸಕಾಂಗ, ಕಾರ್ಯಾಂಗ ನ್ಯಾಯಾಂಗಕ್ಕಿಂತ ಹೆಚ್ಚು ಹೊಣೆಗಾರಿಕೆ ಮಾಧ್ಯಮಗಳ ಮೇಲಿದೆ.

(ಕೊನೆಯ ಪುಟಕ್ಕೆ)....




ತುಮಕೂರು 11: ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿಗಳಾದ ಬಸವರಾಜ ಹೊರಟ್ಟಿಯವರಿಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕ ತುಮಕೂರು ಇದರ ವಾರ್ಷಿಕ ದತ್ತಿ ಪ್ರಶಸ್ತಿಗಳ ಪ್ರದಾನ, ಹಿರಿಯ ಪತ್ರಕರ್ತರಿಗೆ ಗೌರವ ಸನ್ಮಾನ, ಕ್ಷೇಮಾಭಿವೃದ್ಧಿ ನಿಧಿಗೆ ದೇಣಿಗೆ ನೀಡಿದವರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರಿಗೆ ಕೊಡಮಾಡಿದ ಸಮಾಜ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗೌರವಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಗೃಹ ಸಚಿವರಾದ ಡಾ.ಜಿ.ಪರಮೇಶ್ವರ, ಹಲವಾರು ಜನಪ್ರತಿನಿದಿಗಳು, ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳು, ಪತ್ರಕರ್ತರ ಸಂಘದ ಪದಾಧಿಕಾರಿಗಳು, ಜಿಲ್ಲಾ ಪತ್ರಕರ್ತರು, ಪತ್ರಿಕಾ ವಿತರಕರು, ವಿವಿಧ ಪತ್ರಿಕೆಗಳ ಓದುಗ ಅಭಿಮಾನಿಗಳು ಉಪಸ್ಥಿತರಿದ್ದರು.